ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದ ವೀರರ ಸ್ಮರಣೆ ಇಂದು ಅತ್ಯವಶ್ಯವಾಗಿದೆ.
● **ಮಹಾಂತೇಶ ಕೌಜಲಗಿ** ಶಾಸಕರು.

ಕನ್ನಡಪ್ರಭ
ಬುಧವಾರ 13.1.2021

ನಿಧಿ ಸಂಗ್ರಹ ಅಭಿಯಾನಕ್ಕೆ ಜೊಲ್ಲೆ ಚಾಲನೆ

ಚಿಕ್ಕೋಡಿ: ನಿಪ್ಪಾಣಿ ನಗರದಲ್ಲಿ ಆಯೋಜಿಸಿದ್ದ ರಾಮಮಂದಿರ ನಿರ್ಮಾಣ ನಿಧಿ ಸಂಗ್ರಹಣಾ ಅಭಿಯಾನಕ್ಕೆ ಸಂಸದ ಅಣ್ಣಾಸಾಹೇಬ ಜೊಲ್ಲೆ ಚಾಲನೆ ನೀಡಿ ಐತಿಹಾಸಿಕ ರಾಮ ಮಂದಿರ ನಿರ್ಮಾಣಕ್ಕೆ ದೇಣಿಗೆ ನೀಡುವಂತೆ ಮನವಿ ಮಾಡಿದರು. ನಿಪ್ಪಾಣಿ ಸಮಾಧಿ ಮಠದ ಪ್ರಾಣಲಿಂಗ ಸ್ವಾಮೀಜಿಗಳು ಸಾನ್ನಿಧ್ಯ ವಹಿಸಿದ್ದರು ಆರ್.ಎಸ್.ಎಸ್ ವಿಭಾಗ ಸಹ ಸಂಚಾಲಕ ಭಗವತ್ ರಾಮ್‌ಜಿ ಛಾಬಡಾ, ವಿಶ್ವ ಹಿಂದೂ ಪರಿಷತ್‌ನ ಶಿವಾಜಿ ವ್ಯಾಸ, ಹಾಲಸಿದ್ದನಾಥ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಚಂದ್ರಕಾಂತ ಕೋಟಿವಾಲೆ, ಭರತ ಚವ್ಹಾಣ, ನಗರಸಭೆ ಸದಸ್ಯರು ಹಾಗೂ ಬಿಜೆಪಿ ಕಾರ್ಯಕರ್ತರು ಇದ್ದರು.

ರವೀಂದ್ರ ಎನರ್ಜಿ ಲಿಮಿಟೆಡ್

ನೋಂದಾಯಿತ ಕಛೇರಿ : ಬಿಸಿ 109, ಡೇವಿಡ್‌ಸನ್ ರಸ್ತೆ, ಕ್ಯಾಂಪ್, ಬೆಳಗಾವಿ-590001, ಕರ್ನಾಟಕ ಭಾರತ.
ದೂ: +91-831-2406600 ವೆಬ್‌ಸೈಟ್ : www.ravindraenergy.com
CIN: L40104KA1980PLC075720
ಫಾರಂ ಸಂ. ಸಿಎಎ-2
[ಕಲಂ 230(3)ಮತ್ತು ನಿಯಮ 6 ಮತ್ತು 7]
ಬೆಂಗಳೂರಿನ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿ ಪೀಠದ ಮುಂದೆ
ಸಿಎ (ಸಿಎಎ) ಸಂ.39/ಬಿಬಿ/2020 ಮತ್ತು ಐಎ ಸಂ. 2020ರ 509
2013ರ ಕಂಪನಿಗಳ ಕಾಯಿದೆ ಕಲಂ 230 ರಿಂದ 232ರವರೆಗಿನ ವಿಷಯದಲ್ಲಿ ಹಾಗೂ 2016ರ ಕಂಪನಿಗಳ [ಸಂಧಾನಗಳು, ವ್ಯವಸ್ಥೆಗಳು ಮತ್ತು ಸಂಯೋಜನೆ] ನಿಯಮಗಳೊಂದಿಗೆ ಓದಿಕೊಳ್ಳಬೇಕಾದ 2013ರ ಕಂಪನಿಗಳ ಕಾಯಿದೆಯ ಇತರೆ ಅನ್ವಯಿತ ಕಟ್ಟಳೆಗಳ ವಿಷಯದಲ್ಲಿ
ಮತ್ತು
ಅಗ್ರಿವೆಂಚರ್ ಟ್ರೇಡಿಂಗ್ ಅಂಡ್ ಇನ್ವೆಸ್ಟ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ರವೀಂದ್ರ ಎನರ್ಜಿ ಲಿಮಿಟೆಡ್‌ನೊಂದಿಗೆ ಸಂಯೋಜನೆಗೊಳಿಸುವ ವಿಷಯದಲ್ಲಿ
ರವೀಂದ್ರ, ಎನರ್ಜಿ ಲಿಮಿಟೆಡ್ ... ಅರ್ಜಿದಾರ/ ಟ್ರಾನ್ಸ್‌ಫೆರಿ ಕಂಪನಿ
ಸದಸ್ಯರು ಭದ್ರತೆಯಿರುವ ಮತ್ತು ಭದ್ರತೆಯಿರದ ಸಾಲಿಗರ, ಲೆಕ್ಕಪತ್ರ ಪುಸ್ತಕಗಳ ಮುಕ್ತಾಯಗೊಳಿಸುವಿಕೆ ಮತ್ತು ಇ-ಮತದಾನದ ಸೂಚನೆ ಮತ್ತು ಜಾಹೀರಾತು

1. ಸೂಚನೆ ನೀಡುವುದೇನೆಂದರೇ ಗೌರವಾನ್ವಿತ ನ್ಯಾಷನಲ್ ಕಂಪನಿ ಲಾ ಟ್ರಿಬ್ಯುನಲ್ (''ಗೌರವಾನ್ವಿತ ಎನ್‌ಸಿಎಲ್‌ಟಿ'') ಸಿಎ (ಸಿಎಎ)39/ಬಿಬಿ/2020 ದಿನಾಂಕ ನವೆಂಬರ್ 18,2020 ಮತ್ತು ಐಎ ಸಂ. 2020ರ 509 ದಿನಾಂಕ: 14, 2020 ರಂದು ನೀಡಿರುವ ಆದೇಶದಲ್ಲಿ (ಆರ್ಡರ್ಸ್) ನ್ಯಾಷನಲ್ ಕಂಪನಿ ಲಾ ಟ್ರಿಟ್ಯೂನಲ್ (''ಗೌರವಾನ್ವಿತ ಎನ್‌ಸಿಎಲ್‌ಟಿ'') ಬೆಂಗಳೂರು ಪೀಠವು ನಿರ್ದೇಶನ ನೀಡಿರುವುದೇನೆಂದರೇ ರವೀಂದ್ರ ಎನರ್ಜಿ ಲಿಮಿಟೆಡ್‌ನ ಈಕ್ವಿಟಿ ಷೇರುದಾರರ ಮತ್ತು ಭದ್ರತೆಯಿರುವ ಹಾಗೂ ಭದ್ರತೆಯಿಂದ ಸಾಲಿಗರ ಸಭೆಗಳನ್ನು ಅಗ್ರಿ ವೆಂಚರ್ ಟ್ರೇಡಿಂಗ್ ಅಂಡ್ ಇನ್ವೆಸ್ಟ್ ಮೆಂಟ್ ಪ್ರೈವೇಟ್ ಲಿಮಿಟೆಡ್ (ಟ್ರಾನ್ಸ್‌ಫೆರರ್ ಕಂಪನಿ) ಅನ್ನು ರವೀಂದ್ರ ಎನರ್ಜಿ ಲಿಮಿಟೆಡ್ (ಟ್ರಾನ್ಸ್ ಫೆರಿ ಕಂಪನಿ)ಯೊಂದಿಗೆ 2013ರ ಕಂಪನಿಗಳ ಕಾಯಿದೆಯ ಕಲಂ 230 ರಿಂದ 232 ಮತ್ತು ಇತರೆ ಅನ್ವಯಿತ ಕಟ್ಟಳೆಗಳಂತೆ ಮತ್ತು 2016ರ ಕಂಪನಿಗಳ (ಸಂಧಾನಗಳು, ವ್ಯವಸ್ಥೆಗಳು ಮತ್ತು ಸಂಯೋಜನೆ ನಿಯಮಗಳನ್ವಯ ಸಂಯೋಜನೆಯ ಸ್ಕಿಮ್‌ನಲ್ಲಿ ಒಟ್ಟುಗೂಡಿಸಿರುವ ಅಂಶಗಳನ್ನು ಮುಕ್ತವೆನಿಸಿದಲ್ಲಿ ಪರಿಗಣಿಸುವುದಕ್ಕಾಗಿ, ಮಾರ್ಪಾಡಿ(ಗಳೊಂದಿಗೆ)ನೊಂದಿಗೆ ಅಂಗೀಕರಿಸುವುದಕ್ಕಾಗಿ, ಸದರಿ ಕಂಪನಿ ಮತ್ತು ಈಕ್ವಿಟಿ ಷೇರುದಾರರು/ ಭದ್ರತೆಯಿರುವ ಸಾಲಿಗರು/ ಭದ್ರತೆಯಿರದ ಸಾಲಿಗರ ನಡುವಿನ ಸಂಧಾನ ವ್ಯವಸ್ಥೆಗಳನ್ನು ಅಂಗೀಕರಿಸುವುದಕ್ಕಾಗಿ ಸಭೆಯೊಂದನ್ನು ನಡೆಸಬೇಕೆಂದು ಸೂಚಿಸಿದೆ. ಸದರಿ ಆದೇಶದನ್ವಯ ಮತ್ತು ತದನಂತರದ ನಿವೇಶನಗಳಂತೆ ಕೆಳಕಂಡ ಸಭೆಗಾಗಿ ಈ ಮೂಲಕ ಸೂಚನೆಯನ್ನು ನೀಡಲಾಗುತ್ತಿದೆ:-
ಎ. ಟ್ರಾನ್ಸ್‌ಫೆರರ್ ಕಂಪನಿಯ ಈಕ್ವಿಟಿ ಷೇರುದಾರರ ಸಭೆ ವಿಡಿಯೋ ಕಾನ್ಫರೆನ್ಸ್ ಮೂಲಕ (''ವಿಸಿ''), ಸೋಮವಾರ, 15ನೇ ಫೆಬ್ರವರಿ 2021ರಂದು 3.00 ಗಂಟೆಗೆ ನಡೆಯಲಿದೆ. ಈಕ್ವಿಟಿ ಷೇರುದಾರರು ಇದಕ್ಕೆ ಹಾಜರಿರಲು ಕೋರಲಾಗಿದೆ.
ಬಿ. ಟ್ರಾನ್ಸ್‌ಫೆರಿ ಕಂಪನಿಯ ಭದ್ರತಾ ಸಾಲಿಗರ ಸಭೆಯು ವಿಡಿಯೋ ಕಾನ್ಫರೆನ್ಸ್ (''ವಿಸಿ''), ಮೂಲಕ ಮಂಗಳವಾರ, 16ನೇ ಫೆಬ್ರವರಿ 2021 ರಂದು 12.00 ಗಂಟೆಗೆ ನಡೆಯಲಿದೆ. ಭದ್ರತಾ ಸಾಲಿಗರು ಇದಕ್ಕೆ ಹಾಜರಿರಲು ಕೋರಲಾಗಿದೆ.
ಸಿ. ಟ್ರಾನ್ಸ್‌ಫೆರಿ ಕಂಪನಿಯ ಭದ್ರತೆಯಿಂದ ಸಾಲಿಗರ ಸಭೆಯ ವಿಡಿಯೋ ಕಾನ್ಫರೆನ್ಸ್ ಮೂಲಕ (''ವಿಸಿ'') ಮೂಲಕ ಮಂಗಳವಾರ 16ನೇ ಫೆಬ್ರವರಿ 2021ರಂದು ಮಧ್ಯಾಹ್ನ 3.00ಕ್ಕೆ ನಡೆಯಲಿದೆ ಭದ್ರತೆಯಿಂದ ಸಾಲಿಗರು ಇದಕ್ಕೆ ಹಾಜರಿರಲು ಕೋರಲಾಗಿದೆ.
ಸಂಯೋಜನೆ ಸ್ಕೀಮ್‌ನ ಮತ್ತು ಕಲಂ 230ರಡಿಯ ಹೇಳಿಕೆಗಳ ಪ್ರತಿಗಳು ಉಚಿತವಾಗಿ ಕಂಪನಿಯ ನೋಂದಾಯಿತ ಕಛೇರಿ ಮೂಲಕ ಅಥವಾ ವಿದ್ಯುನ್ಮಾನದ ಮೂಲಕ ಪಡೆದುಕೊಳ್ಳಬಹುದು. ಸಂಬಂಧಿಸಿದ ಸಭೆಗೆ ಹಾಜರಿರಲು ಅರ್ಹರಾದ ವ್ಯಕ್ತಿಗಳು ಹಾಜರಾಗಬಹುದು ಮತ್ತು ಮತ ಹಾಕಬಹುದು. ವ್ಯಕ್ತಿಗತವಾಗಿ ಅಥವಾ ಪ್ರಾಕ್ಸಿ ಮೂಲಕ ಮತ ಹಾಕಬಹುದು. ಇದಕ್ಕಾಗಿ ಎಲ್ಲಾ ಪ್ರಾಕ್ಸಿಗಳು ಇ ನಿಗದಿತ ನಮೂನೆಯನ್ನು ಕಂಪನಿಯ ನೋಂದಾಯಿತ ಕಛೇರಿ ಬಿಸಿ 109, ಡೇವಿಡ್‌ಸನ್ ರಸ್ತೆ ಕ್ಯಾಂಪ್, ಬೆಳಗಾವಿ-590001-ಇಲ್ಲಿಗೆ ಸಭೆಯ 48 ಗಂಟೆಗಳ ಮುಂಚೆ ಸಲ್ಲಿಸಬೇಕು. ಪ್ರಾಕ್ಸಿಯ ನಮೂನೆಯನ್ನು ಕಂಪನಿಯ ನೋಂದಾಯಿತ ಕಛೇರಿಯಿಂದ ಪಡೆದುಕೊಳ್ಳಬೇಕು.
ಮತ್ತೂ ಸೂಚನೆ ಪಡೆದುಕೊಳ್ಳಬೇಕಾದುದೇನೆಂದರೇ, ಎನ್‌ಸಿಎಲ್‌ಟಿಯು ಶ್ರೀ ಅಜಯ್ ಜಾನ್ಸನ್, ವಕೀಲರು ಬೆಂಗಳೂರುರವರನ್ನು ಸಂಬಂಧಿತ ಸಭೆಗಳ ಪೀಠಾಧಿಪತಿ (ಚೇರ್‌ಪರ್ಸನ್) ಆಗಿ ನೇಮಿಸಿದೆ. ಮೇಲಿನ ಸಂಯೋಜನೆಯ ತದನಂತರದ ಮಂಜೂರಾತಿಗೆ ಒಳಪಡುತ್ತದೆ ಸ್ಕೀಮ್ ಸಭೆಯಲ್ಲಿ ಅಂಗೀಕಾರಗೊಂಡಲ್ಲಿ ಎನ್‌ಸಿಎಲ್‌ಟಿಯ ಮತ್ತು ಇತರ ಪ್ರಾಧಿಕಾರಿಗಳ ಅನ್ವಯಿತ ನಿಯಂತ್ರಣಕ್ಕೆ ಒಳಪಡುತ್ತವೆ.

ಸಹಿ/-
ಶ್ರೀ. ಅಜಯ್ ಪಿ. ಜಾನ್ಸನ್, ವಕೀಲರು
ಬೆಳಗಾವಿ, ಜನವರಿ 2, 2021 ಸಭೆಗಾಗಿ ನೇಮಿಸಲಾದ ಪೀಠಾಧ್ಯಕ್ಷರು (ಚೇರ್‌ಪರ್ಸನ್)

ರವೀಂದ್ರ ಎನರ್ಜಿ ಲಿಮಿಟೆಡ್

ನೋಂದಾಯಿತ ಕಛೇರಿ : ಬಿಸಿ 109, ಡೇವಿಡ್‌ಸನ್ ರಸ್ತೆ, ಕ್ಯಾಂಪ್, ಬೆಳಗಾವಿ-590001, ಕರ್ನಾಟಕ, ಭಾರತ.
ದೂ: +91-831-2406600 ವೆಬ್‌ಸೈಟ್ : www.ravindraenergy.com
CIN: L40104KA1980PLC075720
ಸದಸ್ಯರು ಭದ್ರತೆಯಿರುವ ಮತ್ತು ಭದ್ರತೆಯಿರದ ಸಾಲಿಗರ, ಲೆಕ್ಕಪತ್ರ ಪುಸ್ತಕಗಳ ಮುಕ್ತಾಯಗೊಳಿಸುವಿಕೆ ಮತ್ತು ಇ-ಮತದಾನದ ಸೂಚನೆ ಮತ್ತು ಜಾಹೀರಾತು

1. ಸೂಚನೆ ನೀಡುವುದೇನೆಂದರೇ ಗೌರವಾನ್ವಿತ ನ್ಯಾಷನಲ್ ಕಂಪನಿ ಲಾ ಟ್ರಿಬ್ಯುನಲ್ (''ಗೌರವಾನ್ವಿತ ಎನ್‌ಸಿಎಲ್‌ಟಿ'') ಸಿಎ (ಸಿಎಎ)39/ಬಿಬಿ/2020 ದಿನಾಂಕ ನವೆಂಬರ್ 18,2020 ಮತ್ತು ಐಎ ಸಂ. 2020ರ 509 ದಿನಾಂಕ: 14, 2020 ರಂದು ನೀಡಿರುವ ಆದೇಶದಲ್ಲಿ (ಆರ್ಡರ್ಸ್) ನ್ಯಾಷನಲ್ ಕಂಪನಿ ಲಾ ಟ್ರಿಟ್ಯೂನಲ್ (''ಗೌರವಾನ್ವಿತ ಎನ್‌ಸಿಎಲ್‌ಟಿ'') ಬೆಂಗಳೂರು ಪೀಠವು ನಿರ್ದೇಶನ ನೀಡಿರುವುದೇನೆಂದರೇ ರವೀಂದ್ರ ಎನರ್ಜಿ ಲಿಮಿಟೆಡ್‌ನ ಈಕ್ವಿಟಿ ಷೇರುದಾರರ ಮತ್ತು ಭದ್ರತೆಯಿರುವ ಹಾಗೂ ಭದ್ರತೆಯಿಂದ ಸಾಲಿಗರ ಸಭೆಗಳನ್ನು ಅಗ್ರಿ ವೆಂಚರ್ ಟ್ರೇಡಿಂಗ್ ಅಂಡ್ ಇನ್ವೆಸ್ಟ್ ಮೆಂಟ್ ಪ್ರೈವೇಟ್ ಲಿಮಿಟೆಡ್ (ಟ್ರಾನ್ಸ್‌ಫೆರರ್ ಕಂಪನಿ) ಅನ್ನು ರವೀಂದ್ರ ಎನರ್ಜಿ ಲಿಮಿಟೆಡ್ (ಟ್ರಾನ್ಸ್ ಫೆರಿ ಕಂಪನಿ)ಯೊಂದಿಗೆ 2013ರ ಕಂಪನಿಗಳ ಕಾಯಿದೆಯ ಕಲಂ 230 ರಿಂದ 232 ಮತ್ತು ಇತರೆ ಅನ್ವಯಿತ ಕಟ್ಟಳೆಗಳಂತೆ ಮತ್ತು 2016ರ ಕಂಪನಿಗಳ (ಸಂಧಾನಗಳು, ವ್ಯವಸ್ಥೆಗಳು ಮತ್ತು ಸಂಯೋಜನೆ ನಿಯಮಗಳನ್ವಯ ಸಂಯೋಜನೆಯ ಸ್ಕಿಮ್‌ನಲ್ಲಿ ಒಟ್ಟುಗೂಡಿಸಿರುವ ಅಂಶಗಳನ್ನು ಯುಕ್ತವೆನಿಸಿದಲ್ಲಿ ಪರಿಗಣಿಸುವುದಕ್ಕಾಗಿ, ಮಾರ್ಪಾಡಿ(ಗಳೊಂದಿಗೆ)ನೊಂದಿಗೆ ಅಂಗೀಕರಿಸುವುದಕ್ಕಾಗಿ, ಸದರಿ ಕಂಪನಿ ಮತ್ತು ಈಕ್ವಿಟಿ ಷೇರುದಾರರು/ ಭದ್ರತೆಯಿರುವ ಸಾಲಿಗರು/ ಭದ್ರತೆಯಿರದ ಸಾಲಿಗರ ನಡುವಿನ ಸಂಧಾನ ವ್ಯವಸ್ಥೆಗಳನ್ನು ಅಂಗೀಕರಿಸುವುದಕ್ಕಾಗಿ ಸಭೆಯೊಂದನ್ನು ನಡೆಸಲಾಗುತ್ತದೆ. 2013ರ ಕಂಪನಿಗಳ ಕಾಯಿದೆಯ ಕಲಂ 13ರಡಿ ಕೋರಮ್ ಉದ್ದೇಶಕ್ಕಾಗಿ ವಿಸಿ ಮೂಲಕ ಭಾಗವಹಿಸುವ ಸದಸ್ಯರನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು ಸದಸ್ಯರು ವಿಡಿಯೋ ಕಾನ್ಫರೆನ್ಸಿಂಗ್ (ವಿಸಿ) ಮೂಲಕ ಸಭೆಗೆ ಹಾಜರಾಗಬೇಕು. ಸಭೆಗೆ ಸೇರಿಕೊಳ್ಳುವುದಕ್ಕಾಗಿನ ಸೂಚನೆಗಳನ್ನು ಹಾಗೂ ಇ-ವೋಟಿಂಗ್/ಎಲೆಕ್ಟ್ರಾನಿಕ್ ವೋಟಿಂಗ್ ವ್ಯವಸ್ಥೆಯ ರೀತಿಗಳನ್ನು ಸಭೆ ನಡೆಸುವುದಕ್ಕಾಗಿನ ನೋಟೀಸ್‌ನಲ್ಲಿ ಒದಗಿಸಲಾಗಿದೆ.
2. ಸಭೆಗಳ ನೋಟೀಸ್ ಮತ್ತು ಲಗತ್ತಿಸಬೇಕಾದ ಇತರೆ ದಾಖಲೆಗಳನ್ನು ಕಂಪನಿಯ ಸದಸ್ಯರಿಗೆ, ಭದ್ರತೆಯಿರುವ ಮತ್ತು ಭದ್ರತೆಯಿರದ ಸಾಲಿಗರಿಗೆ ಬೆಂಗಳೂರಿನಲ್ಲಿನ ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಪೀಠದ ನಿರ್ದೇಶನದಂತೆ ಕಳುಹಿಸಲಾಗಿದೆ ನೋಟೀಸಿನ ರವಾನೆಯನ್ನು ಜನವರಿ 12, 2021ಕ್ಕೆ ಪೂರ್ಣಗೊಳಿಸಲಾಗಿದೆ.
3. 2013ರ ಕಂಪನಿಗಳ ಕಾಯಿದೆಯ ಕಲಂ 91ರ ಅನ್ವಯ ಹಾಗೂ ಇದರಡಿಯ ನಿಯಮಗಳು ತದನಂತರದ ಕಟ್ಟಳೆಗಳಂತೆ ಏನಾದರೂ ಇದ್ದರೆ ಅವುಗಳಂತೆ ಹಾಗೂ ಏನಾದರೂ ಇದ್ದಲ್ಲಿ ಸೆಬಿಯ ಲಿಸ್ಟಿಂಗ್ ನಿಯಂತ್ರಣಗಳಂತೆ ಸದಸ್ಯರುಗಳ ರಿಜಿಸ್ಟರ್ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು ಶುಕ್ರವಾರ ಫೆಬ್ರವರಿ 12, 2021 ರಿಂದ ಮಂಗಳವಾರ ಫೆಬ್ರವರಿ 16, 2021ರವರೆಗೂ (ಎರಡು ದಿನಗಳೂ ಸೇರಿದಂತೆ) ಮುಚ್ಚಲಾಗಿರುತ್ತದೆ.
4. 2013ರ ಕಂಪನಿಗಳ ಕಾಯಿದೆಯ ಕಲಂ 108ರ ಅನ್ವಯ ಹಾಗೂ ಕಂಪನಿಗಳ (ವ್ಯವಸ್ಥಾಪನೆ ಮತ್ತು ಆಡಳಿತ) ನಿಯಮಗಳು 2014ರ ನಿಯಮಗಳ ನಿಯಮ 20ರರೊಂದಿಗೆ ಓದಿಕೊಂಡಂತೆ, ಸೆಬಿ ಲಿಸ್ಟಿಂಗ್ ನಿಯಂತ್ರಣಗಳ ನಿಯಂತ್ರಣ 44ರಂತೆ ಕಂಪನಿಯು ತನ್ನ ಸದಸ್ಯರಿಗೆ ವಿದ್ಯುನ್ಮಾನ ಮತದಾನ (ರಿಮೋಟ್ ಇ-ವೋಟಿಂಗ್) ಸೌಲಭ್ಯವನ್ನು ಒದಗಿಸುತ್ತದೆ ಎಂದು ತಿಳಿಸಲು ಹರ್ಷಿಸುತ್ತದೆ. ಕಂಪನಿಯು ಸಭೆ ನಡೆಯುವಾಗಲೂ ಅದೃಶ್ಯ ಮತದಾನದ ಮೂಲಕ ಮತದಾನ ಮಾಡದ ತನ್ನ ಸದಸ್ಯರಿಗೆ ತಮ್ಮ ಇ-ಮತದಾನ ಮಾಡುವ ಸೌಲಭ್ಯವನ್ನು ಸಹ ಒದಗಿಸುತ್ತದೆ.
5. ಕಂಪನಿಯ ಭದ್ರತೆಯಿರುವ ಹಾಗೂ ಭದ್ರತೆಯಿಲ್ಲದ ಸಾಲಿಗರಿಗೆ ಕಂಪನಿಯ ಬ್ಯಾಲೆಟ್ ಮೂಲಕ ವೋಟಿಂಗ್ ಮಾಡುವ ಸೌಲಭ್ಯವನ್ನು ಒದಗಿಸುತ್ತದೆ. ಸಾಲಿಗರು ಬ್ಯಾಲೆಟ್ ಪೇಪರಿನ ಸಹಿ ಮಾಡಿದ ಪ್ರತಿಯನ್ನು ನೋಂದಾಯಿತ ಕಛೇರಿಯಲ್ಲಿ ಸಭೆಯ ದಿನಾಂಕದ ಮುಂಚೆ ಸಲ್ಲಿಸಬೇಕು.
6. **ಇ-ಮತದಾನ/ ವಿದ್ಯುನ್ಮಾನ ಮತದಾನದಲಿ ಮತವ (ಗಳ)ನ್ನು ಮಾಡಲು ಅನುಸರಿಸಬೇಕಾದ ರೀತಿ ನೀತಿಗಳು**
(ಎ) ಸದಸ್ಯರು ಮತದಾನ ವ್ಯವಸ್ಥೆಯ ಸೂಚನೆಯಲ್ಲಿ ತಿಳಿಸಲಾದ ವಿಷಯಗಳಿಗೆ ಅದೃಶ್ಯ ಇ-ಮತದಾನ ಅಥವಾ ವಿದ್ಯುನ್ಮಾನದ ಮೂಲಕ ಎಜಿಎಂನಲ್ಲಿ ತಮ್ಮ ಮತವ(ಗಳ)ನ್ನು ಹಾಕುವ (ಇನ್ಸ್ ಟಾ ಪೋಲ್) ಅವಕಾಶ ಪಡೆಯುತ್ತಾರೆ.
(ಬಿ) ಅಭೌತಿಕ ರೀತಿಯಲ್ಲಿ ಷೇರು ಹೊಂದಿರುವ, ಭೌತಿಕ ರೀತಿಯಲ್ಲಿ ಷೇರು ಹೊಂದಿರುವ ಹಾಗೂ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಅದೃಶ್ಯ ಮತದಾನಕ್ಕಾಗಿ (''ರಿಮೋಟ್ ಇ-ವೋಟಿಂಗ್'') ಮತ್ತು ಎಜಿಎಂನಲ್ಲಿನ ವಿದ್ಯುನ್ಮಾನ ಮತದಾನ ವ್ಯವಸ್ಥೆಯಲ್ಲಿ ಅನುಸರಿಸಬೇಕಾದ ಸೂಚನೆಗಳನ್ನು ಎಜಿಎಂ ಸೂಚನೆಯಲ್ಲಿ ಒದಗಿಸಲಾಗಿದೆ. ಎಜಿಎಂಗೆ ಹಾಜರಾಗುವ ಸದಸ್ಯರು ರಿಮೋಟ್ ಇ-ವೋಟಿಂಗ್‌ನಲ್ಲಿ ಮತ ಹಾಕದಿದ್ದಲ್ಲಿ ಎಜಿಎಂನಲ್ಲಿ ಇನ್ಸ್‌ಟಾ ಪೋಲ್ ಮೂಲಕ ಮತದಾನ ಮಾಡಬಹುದಾಗಿದೆ. ಅದೃಶ್ಯ ಇ-ಮತದಾನ ಮತ್ತು ಎಜಿಎಂ ಮತದಾನದಲ್ಲಿಅನುಸರಿಸಬೇಕಾದಸೂಚನೆಗಳುಕಂಪನಿಯವೆಬ್‌ಸೈಟ್:www.ravindraenergy.com ಮತ್ತು https://evoting.kfintech.com/ನಲ್ಲೂ ಸಹ ಲಭ್ಯವಿರುತ್ತದೆ.
7. ನಿಗದಿತ ದಿನಾಂಕ (ಕಟ್‌ಆಫ್ ಡೇಟ್) ಅಂದರೆ, ಫೆಬ್ರವರಿ, 8, 2021, ರಂದು ಭೌತಿಕ ನಮೂನೆ ಅಥವಾ ಅಭೌತಿಕ ನಮೂನೆಯಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಸೂಚನಾ ಪತ್ರದಲ್ಲಿ ತಿಳಿಸಿರುವ ವ್ಯವಹಾರಗಳ ಮೇಲೆ ವಿದ್ಯುನ್ಮಾನದ ಮೂಲಕ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (''ಕೆಫಿನ್‌ಟೆಕ್''), (''ರಿಮೋಟ್ ಇ-ವೋಟಿಂಗ್'')ರವರು ಒದಗಿಸಿರುವ ವಿದ್ಯುನ್ಮಾನ ವೋಟಿಂಗ್ ವ್ಯವಸ್ಥೆಯ ಮೂಲಕ ಎಜಿಎಂ ನಡೆಯುವ ಸ್ಥಳದಿಂದ ಹೊರತುಪಡಿಸಿದ ಜಾಗದಲ್ಲಿ (ಅದೃಶ್ಯ ಇ-ಮತದಾನ) ಮಾಡಬಹುದಾಗಿದೆ. ಸದಸ್ಯರುಗಳಿಗೆ ನೀಡುವ ಮಾಹಿತಿಯೇನೆಂದರೆ,
i. ಸೂಚನಾ ಪತ್ರದಲ್ಲಿ ತಿಳಿಯಪಡಿಸಿದ ವ್ಯವಹಾರ ವಿಷಯಗಳ ಮೇಲೆ ವಿದ್ಯುನ್ಮಾನ ಮೂಲಕದ ಮತದಾನದಿಂದ ವ್ಯವಹರಿಸಬಹುದು.
ii. ಅದೃಶ್ಯ ಇ-ಮತದಾನವು 12ನೇ ಫೆಬ್ರವರಿ 2021ರ ಶುಕ್ರವಾರ ಬೆಳಿಗ್ಗೆ 9.00 ಕ್ಕೆ ಆರಂಭವಾಗುತ್ತದೆ.
iii. ಅದೃಶ್ಯ ಮತದಾನವು 14ನೇ ಫೆಬ್ರವರಿ 2021ರ ಸಂಜೆ 5.00 ಕ್ಕೆ ಮುಕ್ತಾಯಗೊಳ್ಳುತ್ತದೆ.
iv. ವಿದ್ಯುನ್ಮಾನದ ಮೂಲಕ ಅಥವಾ ಎಜಿಎಂನಲ್ಲಿ ಮತಹಾಕಲು ಅರ್ಹತೆಯನ್ನು ನಿರ್ಧರಿಸಲು ನಿಗದಿತ (ಕಟ್‌ಆಫ್) ದಿನಾಂಕ ಫೆಬ್ರವರಿ 8, 2021 ಆಗಿರುತ್ತದೆ.
v. ಯಾವುದೇ ವ್ಯಕ್ತಿ ಸೂಚನಾ ಪತ್ರಗಳ ರವಾನೆಯ ನಂತರ ಷೇರುಗಳನ್ನು ಹೊಂದಿ ಕಂಪನಿಯ ಸದಸ್ಯನಾದಲ್ಲಿ ಅಥವಾ ನಿಗದಿತ ದಿನಾಂಕ ಅಂದರೇ ಕಟ್ ಆಫ್ ಡೇಟ್‌ನಂದು ಷೇರುಗಳನ್ನು ಹೊಂದಿದ್ದರೆ evoting@kfintech.com;ಗೆ ಇ-ಮೇಲ್ ಕಳುಹಿಸಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬಹುದಾಗಿದೆ.
vi. ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕಾದ ಸಂಗತಿಯೇನೆಂದರೇ (ಎ) ಇ-ಮತದಾನಕ್ಕಾಗಿ ಒದಗಿಸಲಾದ ದಿನಾಂಕ ಮತ್ತು ಸಮಯದ ನಂತರ ಕೆಫಿನ್ ಟೆಕ್‌ರವರು ಅದೃಶ್ಯ ಇ-ಮತದಾನದ ಮಾಡ್ಯೂಲನ್ನು ಮುಚ್ಚುತ್ತಾರೆ (ಬಿ) ಎಜಿಎಂ ಇನ್ಸ್‌ಟಾ ಪೋಲ್ ಮತದಾನ ಮಾಡುವುದಕ್ಕಾಗಿ ವಿದ್ಯುನ್ಮಾನ ವ್ಯವಸ್ಥೆಯನ್ನು ಒದಗಿಸಲಾಗುತ್ತದೆ (ಸಿ) ಅದೃಶ್ಯ ಮತದಾನದ ಮೂಲಕ ಸಭೆಗೆ ಮುಂಚೆ ಮತದಾನ ಮಾಡಿರುವವರು ಎಜಿಎಂ ಸಭೆಗೂ ಸಹ ಹಾಜರಿರಬಹುದಾಗಿದೆ ಆದರೆ ಸಭೆಯಲ್ಲಿ ಮತದಾನ ಮಾಡಲು ಅರ್ಹರಾಗುವುದಿಲ್ಲ ಮತ್ತು (ಡಿ) ಯಾವ ವ್ಯಕ್ತಿಯ ಹೆಸರು ನಿಗದಿತ ದಿನಾಂಕದಂದು ಇದ್ದಂತೆ ಸದಸ್ಯರ ರಿಜಿಸ್ಟರ್‌ನಲ್ಲಿ ದಾಖಲಾಗಿದೆಯೋ ಅಥವಾ ನಿಕ್ಷೇಪದಾರರು ನಿರ್ವಹಿಸುತ್ತಿರುವ ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ದಾಖಲಾಗಿದೆಯೋ ಅಂತಹ ಸದಸ್ಯರು ಅದೃಶ್ಯ ಇ-ಮತದಾನ ಸೌಲಭ್ಯವನ್ನು ಪಡೆದುಕೊಳ್ಳಲು ಹಾಗೂ ಸಭೆಯಲ್ಲೂ ವಿದ್ಯುನ್ಮಾನ ವ್ಯವಸ್ಥೆ (ಇನ್ಸ್‌ಟಾ ಪೋಲ್)ಯಲ್ಲಿ ಮತದಾನ ಮಾಡಲು ಅರ್ಹನಿರುತ್ತಾನೆ.
vii. ಸೂಚನಾ ಪತ್ರ ಮತ್ತು ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ www.ravindraenergy.comನಲ್ಲಿ ''ಇನ್ವೆಸ್ಟರ್''ನಡಿ, ಬಿಎಸ್‌ಇ ಲಿಮಿಟೆಡ್‌ನಲ್ಲಿನ www.bseindia.comನಲ್ಲಿ ಹಾಗೂ ಕೆಫಿನ್ ಟೆಕ್‌ನ ವೆಬ್‌ಸೈಟ್ https://evoting.kfintech.com/. ನಲ್ಲಿ ಲಭ್ಯವಿರುತ್ತದೆ.
viii. ಸದಸ್ಯರುಗಳು ಯಾವುದೇ ಸ್ಪಷ್ಟನೆ ವಿವರಣೆಗಳು ಬೇಕಾದಲ್ಲಿ ಪದೇ ಪದೇ ಕೇಳುವ ಪ್ರಶ್ನೆಗಳನ್ನು (ಎಫ್ ಎಕ್ಯೂಸ್) ನೋಡಲು https://evoting.kfintech.com/ನಿಂದ ಡೌನ್‌ಲೋಡ್ ಸೆಕ್ಷನ್‌ನಲ್ಲಿ ಲಭ್ಯವಾಗುವ ಇ-ವೋಟಿಂಗ್ ಯೂಸರ್ ಮ್ಯಾನ್ಯುವಲ್ ಅನ್ನು ನೋಡುವುದು. ಅಥವಾ ಹೆಚ್ಚಿನ ಸ್ಪಷ್ಟನೆಗಳಿಗಾಗಿ ಶ್ರೀ ಆನಂದನ್ ಕೆ., ವ್ಯವಸ್ಥಾಪಕ, ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಸೆಲೆನಿಯಂ ಟವರ್ ಸಂ.ಬಿ, ಪ್ಲಾಟ್ ಸಂ. 31-32, ಗಚ್ಚಿಬೌಲಿ, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್‌ರಾಮ್‌ಗುಡ, ಹೈದರಾಬಾದ್ 500032, ಇಮೇಲ್: anandan.k@kfintech.com ಮತ್ತು einward.ris@kfintech.com, ದೂರವಾಣಿ +91-40-67161591 ಅಥವಾ ಹೆಚ್ಚಿನ ಸ್ಪಷ್ಟನೆಗಳಿಗಾಗಿ ಶುಲ್ಕ ರಹಿತ ಸಂಖ್ಯೆ 1800-34-54-001 ಕ್ಕೆ ಕರೆ ಮಾಡಬಹುದಾಗಿದೆ.

ಸಹಿ/-
ಶ್ರೀ. ಅಜಯ್ ಪಿ. ಜಾನ್ಸನ್, ವಕೀಲರು
ಬೆಳಗಾವಿ, ಜನವರಿ 2, 2021 ಸಭೆಗಾಗಿ ನೇಮಿಸಲಾದ ಪೀಠಾಧ್ಯಕ್ಷರು (ಚೇರ್‌ಪರ್ಸನ್)

ರಾಯಣ್ಣನ ಇತಿಹಾಸ ಯುವಕರಿಗೆ ಸ್ಫೂರ್ತಿ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉತ್ಸವದಲ್ಲಿ ಶಾಸಕ ಮಹಾಂತೇಶ ಕೌಜಲಗಿ

● **ಕನ್ನಡಪ್ರಭ ವಾರ್ತೆ** ಬೈಲಹೊಂಗಲ

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದ ವೀರರ ಸ್ಮರಣೆ ಇಂದು ಅತ್ಯವಶ್ಯವಾಗಿದೆ ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ಮಂಗಳವಾರ ತಾಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉತ್ಸವ-2021 ಕಾರ್ಯಕ್ರಮದಲ್ಲಿ ರಾಯಣ್ಣನ ಸಮಾಧಿಯ ಪುಣ್ಯಭೂಮಿ ನಂದಗಡದಿಂದ ಆಗಮಿಸಿದ ಜ್ಯೋತಿ ಸ್ವಾಗತಿಸಿಕೊಂಡು, ರಾಕ್ ಗಾರ್ಡನ್ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಯಣ್ಣ ಒಬ್ಬ ಅಪ್ಪಟ ದೇಶ ಭಕ್ತರಾಗಿದ್ದರು. ಅವರ ಶೌರ್ಯ, ಸಾಹಸವನ್ನು ಇಂದಿನ ಯುವ ಪೀಳಿಗೆ ಜೀವನದಲ್ಲಿ ಅಳವಡಿಸಿಕೊಂಡು ಬಲಿಷ್ಠ ರಾಷ್ಟ್ರ ನಿರ್ಮಾಣ ಮಾಡಲು ಸಂಕಲ್ಪ ಮಾಡಬೇಕು ಎಂದರು.

ಈಗಾಗಲೇ ಸಂಗೊಳ್ಳಿಯಲ್ಲಿ 100 ಎಕರೆ ಪ್ರದೇಶದಲ್ಲಿ ₹165 ಕೋಟಿ ವೆಚ್ಚದಲ್ಲಿ ಸಂಗೊಳ್ಳಿ ರಾಯಣ್ಣನ ಹೆಸರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸೈನಿಕ ಶಾಲೆ ನಿರ್ಮಾಣದ ಕಾರ್ಯ ಪ್ರಗತಿ ಹಂತದಲ್ಲಿದ್ದು, ಮುಂದಿನ ವರ್ಷ ಲೋಕಾರ್ಪಣೆಗೊಳ್ಳಲಿದೆ. 15 ಎಕರೆ ಜಾಗದಲ್ಲಿ ₹12 ಕೋಟಿ ವೆಚ್ಚದಲ್ಲಿ ರಾಕ್ ಗಾರ್ಡನ್ ನಿರ್ಮಾಣವಾಗಲಿದ್ದು, ಕಿತ್ತೂರು ಚನ್ನಮ್ಮ, ರಾಯಣ್ಣ ಅವರ ಬಾಲ್ಯ, ಯೌವನ, ಹೋರಾಟ, ಬ್ರಿಟಿಷರ ಜೊತೆಗೆ ಯುದ್ಧ ಮಾಡಿದ ಸನ್ನಿವೇಶದ ಚಿತ್ರಣಗಳ ವೈಭವ ಮೂಡಿಬರಲಿದೆ ಎಂದರು.

₹70 ಕೋಟಿ ವೆಚ್ಚದಲ್ಲಿ ನಂದಗಡದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ ಅಂತಾರಾಷ್ಟ್ರೀಯ ಮಟ್ಟದ ರಾಯಣ್ಣನ ಇತಿಹಾಸವನ್ನು ಬಿಂಬಿಸುವ ಮ್ಯೂಸಿಯಂ ಶೀಘ್ರದಲ್ಲಿ ಜನತೆಗೆ ತಲುಪಿಸುವ ಕಾರ್ಯ ಮಾಡಲಾಗುತ್ತಿದೆ ಎಂದರು.

ನಂದಗಡದಿಂದ ಆಗಮಿಸಿದ ಜ್ಯೋತಿಗೆ ಗಣ್ಯರು ಸ್ವಾಗತ ಕೋರಿದರು.

ಬೆಳಗಾವಿ ಕಾಡಾ ಅಧ್ಯಕ್ಷ ಡಾ.ವಿಶ್ವನಾಥ ಪಾಟೀಲ ಮಾತನಾಡಿ, ಕಿತ್ತೂರ ಚನ್ನಮ್ಮಾಜಿಯ ಬಲಗೈ ಬಂಟ ರಾಯಣ್ಣ ದೇಶಕಂಡ ಅಪ್ರತಿಮ ಹೋರಾಟಗಾರರಾಗಿದ್ದರು. ಇವರ ಹೆಸರಿನಲ್ಲಿ ಸರ್ಕಾರ ಅಂತಾರಾಷ್ಟ್ರೀಯ ಮಟ್ಟದ ಸೈನಿಕ ಶಾಲೆ, ರಾಕ್ ಗಾರ್ಡನ್, ಇತಿಹಾಸ ಸಾರುವ ನಿಟ್ಟಿನಲ್ಲಿ ಅನೇಕ ಯೋಜನೆ ರೂಪಿಸಿ ಕಾರ್ಯಗತಗೊಳಿಸುತ್ತಿರುವುದು ಶ್ಲಾಘನೀಯ ಎಂದರು.

ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ ಮಾತನಾಡಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಕಿತ್ತೂರು ಸಾಮ್ರಾಜ್ಯದ ಕೀರ್ತಿಯನ್ನು ಬೆಳಗಿಸುವಲ್ಲಿ ಸಂಗೊಳ್ಳಿ ರಾಯಣ್ಣ ಅವರ ಕೊಡುಗೆ ಅಪಾರವಾಗಿದೆ. ಯುವ ಪೀಳಿಗೆಗೆ ಅವರ ತ್ಯಾಗ ಬಲಿದಾನದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ಉತ್ಸವವನ್ನು ಆಚರಿಸಲಾಗುತ್ತಿದೆ. ಪ್ರತಿಯೊಂದು ಮನೆಯಲ್ಲಿ ಸಂಗೊಳ್ಳಿ ರಾಯಣ್ಣನಂತಹ ಮಕ್ಕಳು ಹುಟ್ಟಲಿ ಎಂದು ಆಶಿಸಿ, ಈ ಬಾರೀ ಕೊವಿಡ್ -19 ಹಿನ್ನೆಲೆಯಲ್ಲಿ ಸರ್ಕಾರ ಸಾಂಕೇತಿಕವಾಗಿ ಉತ್ಸವ ಆಚರಿಸುತ್ತಿದೆ ಎಂದರು.

ಸಂಗೊಳ್ಳಿಯ ಗುರು ಸಿದ್ಧಲಿಂಗೇಶ್ವರ ಸಂಸ್ಥಾನ ಹಿರೇಮಠದ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪ್ರಾತಃ ಕಾಲದಲ್ಲಿ ಅರ್ಚಕ ಬಸವರಾಜ ಡೊಳ್ಳಿನ ಸಂಗಡಿಗರು ರಾಯಣ್ಣನ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ಕಿತ್ತೂರ ಸಂಸ್ಥಾನದ ನಂದಿ ಧ್ವಜಾರೋಹಣ, ರಾಯಣ್ಣ ಪ್ರತಿಮೆಗೆ ಗೌರವ ಸಮರ್ಪಣೆ, ವೀರಜ್ಯೋತಿಗೆ ಕಲಾ ತಂಡದಿಂದ ಸ್ವಾಗತ, ರಾಕ್ ಗಾರ್ಡನ್ ಕಾಮಗಾರಿಗೆ ಭೂಮಿ ಪೂಜೆ ಕಾರ್ಯಕ್ರಮ ಜರುಗಿದವು.

ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮಲ್ಲೇಶಪ್ಪ ಹೊರಪೇಟ, ಜಿಪಂ ಸದಸ್ಯರಾದ ಶಂಕರ ಮಾಡಲಗಿ, ಅನಿಲ ಮೇಕಲಮರಡಿ, ತಾಪಂ ಸದಸ್ಯರಾದ ಗೌಸಸಾಬ ಬುಡ್ಡೆಮುಲ್ಲಾ, ಎಸಿ ಈಶ್ವರ ಉಳ್ಳಾಗಡ್ಡಿ, ತಹಸೀಲ್ದಾರ್ ಡಾ.ದೊಡ್ಡಪ್ಪ ಹೂಗಾರ, ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆಯ ಉಪನಿರ್ದೇಶಕಿ ವಿದ್ಯಾವತಿ ಭಜಂತ್ರಿ, ತಾಪಂ ಇಒ ಸುಭಾಷ ಸಂಪಗಾವಿ, ಸಮಾಜ ಕಲ್ಯಾಣ ಇಲಾಖೆಯ ಮಹೇಶ ಉಣ್ಣಿ, ಸಿಡಿಪಿಒ ಮಹಾಂತೇಶ ಭಜಂತ್ರಿ, ಸಹಾಯಕ ಕೃಷಿ ನಿರ್ದೇಶಕಿ ಪ್ರತಿಭಾ ಹೂಗಾರ, ಬಿಇಒ ಗುರುನಾಥ ಹೂಗಾರ, ತಾಲೂಕು ಆರೋಗ್ಯ ಅಧಿಕಾರಿ ಎಸ್.ಎಸ್. ಸಿದ್ದನ್ನವರ, ಗ್ರಾಪಂ ಸದಸ್ಯರಾದ ಬಸವರಾಜ ಕೊಡ್ಲಿ, ಸಂಗನಗೌಡ ಪಾಟೀಲ, ಶಿವಕುಮಾರ ಪೂಜೇರ, ಫಕೀರಪ್ಪ ಕುರಿ, ಈರಣ್ಣ ಹಳೇಮನಿ, ಇಮಾಮಹುಸೇನ ಖುದ್ದನ್ನವರ, ಬಾಬು ತಳವಾರ, ಸನಹಾ ಖುದ್ದನ್ನವರ, ದೀಪಾ ಬಡವನ್ನರ, ರೂಪಾ ಚಚಡಿ, ರತ್ನಾ ಆನೇಮಠ, ಗಂಗವ್ವ ಹೊಳೆಪ್ಪನವರ, ಮಂಜುಳಾ ಕುಡೋಳ್ಳಿ, ಗಂಗವ್ವ ಪೂಜೇರ, ಹಾಗೂ ಸಾಹಿತಿ ಬಸವರಾಜ ಕಮತ, ನ್ಯಾಯವಾದಿ ಉಮೇಶ ಲಾಳ, ಮಲ್ಲಿಕಾರ್ಜುನ ಕುಡೋಳ್ಳಿ, ನೊಡಲ್ ಅಧಿಕಾರಿ ಆರ್.ಜಿ. ಯಲಿಗಾರ, ಪಿಡಿಒ ಎನ್.ಎಂ. ಮಿಜ್ಜಿ, ಗ್ರಾಮಸ್ಥರು ಇದ್ದರು.

ಭೂ ಸ್ವಾಧೀನಕ್ಕೆ ತೀವ್ರ ಆಕ್ಷೇಪ

ಬೆಳಗಾವಿ: ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ (ಬುಡಾ) ವತಿಯಿ ಂದ ಭೂಸ್ವಾಧೀನ ಮಾಡಲು ರೈತರಿಗೆ ನೋಟಿಸ್ ನೀಡಲಾಗುತ್ತಿದೆ. ರೈತರು ಭೂಮಿ ಕಳೆದುಕೊಳ್ಳಲು ತಯಾರಿಲ್ಲ. ಹಾಗಾಗಿ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಬೇಕು ಎಂದು ತಾಪಂ ಸದಸ್ಯರು ಆಗ್ರಹಿಸಿದರು.

ನಗರದ ತಾಪಂ ಸಭಾಂಗಣದಲ್ಲಿ ಮಂಗಳವಾರ ನಡೆದ ತಾಪಂ ಸಾಮಾನ್ಯ ಸಭೆಯಲ್ಲಿ ಎಲ್ಲ ಸದಸ್ಯರು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ತಾಪಂ ಅಧ್ಯಕ್ಷ ಶಂಕರಗೌಡ ಪಾಟೀಲ ಅವರು, ಈ ವಿಚಾರವನ್ನು ಜಿಲ್ಲಾಧಿಕಾರಿ ಅವರ ಗಮನಕ್ಕೆ ತರಲಾಗಿದೆ. ಸಂಬಂಧಿಸಿದ ಅಧಿಕಾರಿಗಳಿಂದ ಅಭಿಪ್ರಾಯ ಪಡೆದುಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಅಭಿವೃದ್ಧಿ ಕಾಮಗಾರಿಗಳು ನಿಧಾನವಾಗಿ ನಡೆದಿವೆ. ಎಂಜಿನಿಯರ್‌ಗಳು ಗಮನ ಹರಿಸುತ್ತಿಲ್ಲ. ಮಾತು ಕೇಳುತ್ತಿಲ್ಲ ಎಂದು ಸದಸ್ಯರು ದೂರಿದರು. ತಾಲೂಕು ಪಂಚಾಯಿತಿ ಅಧ್ಯಕ್ಷ ಶಂಕರಗೌಡ ಪಾಟೀಲ ಸದಸ್ಯರನ್ನು ಸಮಾಧಾನಪಡಿಸಿ ಎಂಜಿನಿಯರ್‌ಗಳಿಗೆ ಸೂಚನೆ ನೀಡಿದರು. ಪಾಲಿಕೆ ಆವರಣದಲ್ಲಿ ಕನ್ನಡ ಧ್ವಜ ಹಾರಿಸಿದ್ದನ್ನು ಎಂಇಎಸ್‌ನ ತಾಲೂಕು ಪಂಚಾಯಿತಿ ಸದಸ್ಯ ಖಂಡಿಸಿ, ಭಗವಾ ಧ್ವಜ ಹಾರಿಸಲು ಅವಕಾಶ ನೀಡಬೇಕೆಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷ ಶಂಕರಗೌಡ ಪಾಟೀಲ, ಅಧಿಕಾರಿಗಳ ತಪ್ಪಿನಿಂದ ಇದೆಲ್ಲ ಆಗಿದೆ. ಮರಾಠಿ ಮತ್ತು ಕನ್ನಡ ಭಾಷಿಕರು ಎಲ್ಲ ಅಭಿವೃದ್ಧಿ ಕೆಲಸಗಳಲ್ಲಿ ಒಂದಾಗಿ ಇದ್ದೇವೆ. ಭೇದ ಭಾವ ಯಾವಾಗಲೂ ಇರಲಿಲ್ಲ. ಈಗಲೂ ಬೇಡ ಎಂದು ಸಮಾಧಾನಪಡಿಸಿದರು. ತಾಪಂ ಸದಸ್ಯ ಉದಯ ಸಿದ್ದನ್ನವರ ಮಾತನಾಡಿ, ಬೆಳಗಾವಿ ತಾಲೂಕಿನ ಕಡೋಲಿ ಗ್ರಾಮದಲ್ಲಿ 250 ಅಧಿಕ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಗ್ರಾಪಂ ಚುನಾವಣೆಯಲ್ಲಿ ಮತದಾರರ ಪಟ್ಟಿಯಿಂದ ಹೆಸರು ನಾಪತ್ತೆಯಾಗಿವೆ. ಸರಿಪಡಿಸಬೇಕಾದ ಅಧಿಕಾರಿಗಳು ಜವಾಬ್ದಾರಿ ವಹಿಸಿಕೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಕೂಡಲೇ ಮತದಾರರ ಪಟ್ಟಿ ಸರಿಪಡಿಸಲು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಅಕ್ರಮ ಮಟ್ಟಹಾಕದಿದ್ದರೆ ತಲೆದಂಡ: ಎಡಿಜಿಪಿ

ಬೆಳಗಾವಿ: ಡ್ರಗ್ಸ್ ಸೇರಿದಂತೆ ಅಕ್ರಮ ಚಟುವಟಿಕೆ ಹಾಗೂ ಇತರೆ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋ ಪಿಗಳ ವಿರುದ್ಧ ಕ್ರಮಕೈಗೊಳ್ಳದಿದ್ದರೆ ಸಂಬಂಧಿಸಿದ ಪೊಲೀಸ್ ಅಧಿಕಾ ರಿಗಳನ್ನೇ ತಲೆದಂಡ ಮಾಡಲಾಗು ವುದು ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಸಿ. ಎಚ್.ಪ್ರತಾತ್ ರೆಡ್ಡಿ ಎಚ್ಚರಿಕೆ ನೀಡಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾ ಡಿದ ಅವರು, ಡ್ರಗ್ಸ್ ಸೇರಿದಂತೆ ಇನ್ನಿತರ ಅಕ್ರಮ ಚಟುವಟಿಕೆ ಹಾಗೂ ಪ್ರಕರಣಗಳಲ್ಲಿ ಗೂಂಡಾ ಕಾಯ್ದೆಯಡಿ ಗಡಿಪಾರು ಮಾಡಲು ಪ್ರಸ್ತಾವನೆಗೆ ಕಳುಹಿಸಲಾಗಿದೆ. ಇದು ನಿರಂತರವಾಗಿ ನಡೆಯುವ ಕೆಲಸ. ಏನಾದರೂ ಅಂತಹ ಪ್ರಕರಣಗಳು ಬೆಳಕಿಗೆ ಬಂದಲ್ಲಿ ಮಾಹಿತಿ ನೀಡಬೇಕು ಎಂದರು.

ಬೆಳಗಾವಿ ಪೊಲೀಸ್ ಕಮಿಷನರ್ ವ್ಯಾಪ್ತಿಯಲ್ಲಿ ಸಿಸಿ ಕ್ಯಾಮೆರಾ ಬಂದ್ ಆಗಿರುವ ಬಗ್ಗೆ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ತಿಳಿದುಕೊಂಡು ಸಂಬಂಧಿಸಿದವರ ಮೇಲೆ ಈ ಕ್ರಮ ಕೈಗೊಳ್ಳಲಾಗುವುದು. ಜೊತೆಗೆ ಸಿಸಿ ಕ್ಯಾಮೆರಾಗಳನ್ನು ಸರಿಪಡಿಸುವ ಕೆಲಸವನ್ನೂ ಮಾಡಲಾಗುವುದು ಎಂದರು. ಪೊಲೀಸ್ ಸಿಬ್ಬಂದಿ, ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳನ್ನು ಹೆಚ್ಚಿಸುವ ಕೆಲಸ ಮಾಡಲಾಗುತ್ತಿದೆ. ಜತೆಗೆ ಕೆಲ ಪೊಲೀಸ್ ಠಾಣೆ ಮೇಲ್ದರ್ಜೆಗೆ ಏರಿಸಿ ಆದೇಶಗಳನ್ನು ಹೊರಡಿಸಲಾಗಿದೆ. ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ವಿಚಾರಕ್ಕೆ, ಇದೇ ವರ್ಷ ಸುಮಾರ 10 ಸಾವಿರಕ್ಕೂ ಹೆಚ್ಚಿನ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಈಗಾಗಲೇ ಪೊಲೀಸ್ ಮಹಾನಿರ್ದೇಶಕರು (ಡಿಜಿ)ಹೇಳಿದ್ದಾರೆ. ಆದ್ದರಿಂದ ಈ ವರ್ಷದಷ್ಟು ಸಿಬ್ಬಂದಿಗಳ ನೇಮಕ ಯಾವತ್ತೂ ಆಗಿಲ್ಲ, ಆದರೆ ಇಲಾಖೆ ಕೈಗೆ ಸಿಗಲಿಕ್ಕೆ ಇನ್ನೂ ಎಂಟರಿಂದ ಹತ್ತು ತಿಂಗಳು ಬೇಕಾಗುತ್ತದೆ ಎಂದರು.

ವೀರ ಸನ್ಯಾಸಿ ವಿವೇಕಾನಂದರು

● **ಕನ್ನಡಪ್ರಭ ವಾರ್ತೆ** ಸವದತ್ತಿ

ದೇಶ ಭಕ್ತಿಯೊಂದಿಗೆ ಸಾಮಾಜಿಕ ಸೇವೆ ಮಾಡುವಲ್ಲಿ ಅಖಿಲ ಭಾರತ ವಿಶ್ವ ಹಿಂದು ಪರಿಷತ್ ಕಾರ್ಯ ಅನುಪಮವಾಗಿದೆ ಎಂದು ವಿಧಾನಸಭೆ ಉಪಸಭಾಧ್ಯಕ್ಷ ಆನಂದ ಮಾಮನಿ ಹೇಳಿದರು. ಸ್ಥಳೀಯ ಮಾಮನಿ ಕಲ್ಯಾಣ ಮಂಟಪದಲ್ಲಿ ಅಖಿಲ ಭಾರತ ವಿಶ್ವ ಹಿಂದು ಪರಿಷತ್ ಸವದತ್ತಿ ತಾಲೂಕು ಘಟಕದಿಂದ ಹಮ್ಮಿಕೊಂಡ ಸ್ವಾಮಿ ವಿವೇಕಾನಂದರ 158ನೇ ಜಯಂತಿಯಲ್ಲಿ ಅವರು ಮಾತನಾಡಿದರು. ಮೂಲಿಮಠದ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮೀಜಿ ಮಾತನಾಡಿದರು. ಎಸ್.ವಿ.ಎಸ್ ಬೆಳ್ಳುಬ್ಬಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಮಾರುತಿ ಡೊಂಬರ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಪ್ರಾಚಾರ್ಯ ಎಸ್.ಸಿ.ಮಠಪತಿ, ವಿಜಯ ಮೀಶಿ, ಬವರಾಜ ಮಟ್ಟಿ, ಶಿವಾನಂದ ಅಂಬಿಗೇರ ಇದ್ದರು. ಸಂಧ್ಯಾ ಹಳ್ಳಿಕೇರಿ ಸ್ವಾಗತಿಸಿದರು.

ಅಥಣಿಯಲ್ಲಿ ವಿವೇಕಾನಂದ ಜಯಂತಿ

ಅಥಣಿ: ಸ್ವಾಮಿ ವಿವೇಕಾನಂದರು ಯುವ ಜನಾಂಗಕ್ಕೆ ಆದರ್ಶಮಯ ವ್ಯಕ್ತಿ ಎಂದು ಉಪನ್ಯಾಸಕ ಚಿದಾನಂದ ಗಿರಿಸಾಗರ ಹೇಳಿದರು.

ಸ್ವಾಮಿ ವಿವೇಕಾನಂದರ 158ನೇ ಜನ್ಮದಿನಾಚರಣೆ ಅಂಗವಾಗಿ ಕೆ ಎ ಲೋಕಾಪೂರ ಪದವಿ ಮಹಾವಿದ್ಯಾಲಯದಲ್ಲಿ ವೈಆರ್‌ಸಿ ವಿಭಾಗ ವತಿಯಿಂದ ಹಮ್ಮಿಕೊಂಡ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ಜೆ ಇ ಶಿಕ್ಷಣ ಸಂಸ್ಥೆಯ ಕಾರ್ಯಧ್ಯಕ್ಷ ಡಾ. ರಾಮ ಕುಲಕರ್ಣಿ ಮಾತನಾಡಿದರು. ಪ್ರಾಚಾರ್ಯ ಆರ್ ಎಂ ದೇವರಡ್ಡಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ವೇಳೆ ಡಾ. ಸುಹಾಸ ಕುಲಕರ್ಣಿ, ವೈಆರ್‌ಸಿ ಮುಖ್ಯಸ್ಥರಾದ ಬಿ ಎ ಬಮನಾಳೆ, ಎನ್ ಬಿ ಝುರೆ, ಎನ್.ಎಸ್.ಎಸ್ ಅಧಿಕಾರಿಗಳಾದ ಬಿ ಪಿ ಗುಂಡಾ, ಎಸ್ ಎ ಗಡಗೆ, ಜಿ ಎಮ್ ಕುಲಕರ್ಣಿ, ಜಿ ಎ ದೀಕ್ಷಿತ ಇತರರು ಇದ್ದರು.

ಅಪ್ರತಿಮ ದೇಶಭಕ್ತ ವಿವೇಕಾನಂದರು

ಗೋಕಾಕ: ಸ್ವಾಮಿ ವಿವೇಕಾನಂದರು ಅಪ್ರತಿಮ ದೇಶಭಕ್ತರಾಗಿ ಹಿಂದೂ ಧರ್ಮದ ಶ್ರೇಷ್ಠತೆಯನ್ನು ಜಗತ್ತಿಗೆ ಸಾರಿದ್ದರು ಎಂದು ಎಸ್.ಎಲ್.ಜೆ. ಪದವಿ ಪೂರ್ವ ಮಹಾವಿದ್ಯಾಲಯದ ಉಪನ್ಯಾಸಕ ಅರುಣ ಪೂಜೇರಾ ಹೇಳಿದರು. ಮಂಗಳವಾರ ನಗರದ ಲಕ್ಷ್ಮೀ ಎಜುಕೇಶನ್ ಟ್ರಸ್ಟಿನ ವಿವಿಧ ಅಂಗ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ವಿವೇಕಾನಂದರ ಜಯಂತಿಯಲ್ಲಿ ಅವರು ಮತನಾಡಿದರು. ಟ್ರಸ್ಟ್ ವ್ಯವಸ್ಥಾಪಕ ನಿರ್ದೇಶಕ ಸನತ್ ಜಾರಕಿಹೊಳಿ ಉದ್ಘಾಟಿಸಿದರು. ವೇದಿಕೆ ಮೇಲೆ ವಿವಿಧ ಅಂಗ ಸಂಸ್ಥೆಗಳ ಮುಖ್ಯಸ್ಥರಾದ ಐ.ಎಸ್.ಪವಾರ, ಎನ್.ಕೆ. ಮಿರಾಸಿ, ಎಚ್.ಎಸ್.ಅಡಿಬಟ್ಟಿ, ಬಿ.ಕೆ.ಕುಲಕರ್ಣಿ, ಎಚ್.ವ್ಹಿ.ಪಾಗನಿಸ, ಪಿ.ವ್ಹಿ. ಚಚಡಿ ಇದ್ದರು.

ಮೂಡಲಗಿಯಲ್ಲಿ ವಿವೇಕಾನಂದರ ಜಯಂತಿ

ಮೂಡಲಗಿ: ಭವ್ಯ ಭಾರತದ ಸಿಡಿಲ ಸನ್ಯಾಸಿಯಾಗಿ ಉಕ್ಕಿನ ಮನುಷ್ಯರಾಗಿ, ಪರಿವ್ರಾಜಕರಾಗಿ ಯೋಗಿ, ವೀರ ಸನ್ಯಾಸಿ ಇತ್ಯಾದಿ ಬಿದಿರು ಬಾವಲಿಗಳಿಂದ ಪ್ರಖ್ಯಾತರಾಗಿ ಯುವಶಕ್ತಿಯ ಪ್ರೇರಕರಾಗಿ, ಸಾವಿರಾರು ಯುವಜನರ ಬಾಳಿಗೆ ಬೆಳಕಾದ ಸ್ವಾಮಿ ವಿವೇಕಾನಂದರ ಸಿಂಹಘರ್ಜನೆಯ ನುಡಿಗಳು ನಮಗೆ ಸ್ಫೂರ್ತಿ. ಅವರ ಒಂದೊಂದು ಮಾತುಗಳು ನಮಗೆ ಶ್ರೀರಕ್ಷೆಯಾಗಿವೆ ಎಂದು ಪ್ರಾಧ್ಯಾಪಕ ಶಿವಕುಮಾರ ಹೇಳಿದರು.

ಸ್ಥಳೀಯ ಶ್ರೀಪಾದಬೋಧ ಸ್ವಾಮೀಜಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಹಾಗೂ ಸಾಂಸ್ಕೃತಿಕ ವಿಭಾಗ ವತಿಯಿಂದ ಹಮ್ಮಿಕೊಂಡ ವೀರಸನ್ಯಾಸಿ ಸ್ವಾಮಿ ವಿವೇಕಾನಂದರ 158ನೇ ಜನ್ಮದಿನ ಹಾಗೂ ರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಪ್ರಾಂಶುಪಾಲ ಶಾನೂರಕುಮಾರ ಗಾಣಿಗೇರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಯೋಜಕರಾದ ಅಶ್ವಿನಿ ಎಸ್., ಸಹಾಯಕ ಪ್ರಾಧ್ಯಾಪಕರುಗಳಾದ ಶಿವಲೀಲಾ, ಡಾ. ರವಿ ಗಡದನ್ನವರ, ವೀಣಾ ಮೂಗನೂರ, ಚೇತನರಾಜ್ ಬಿ. ಇದ್ದರು.

ಜಲಾಲಪೂರದಲ್ಲಿ ಸ್ವಾಮಿ ವಿವೇಕಾನಂದ ಜಯಂತಿ

ರಾಯಬಾಗ: ತಾಲೂಕಿನ ಜಲಾಲಪೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ಯುವ ದಿನದ ಅಂಗವಾಗಿ ಸ್ವಾಮಿ ವಿವೇಕಾನಂದರ ಜನ್ಮದಿನ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ 6 ಮತ್ತು 7ನೇ ವರ್ಗದ ಶಾಲೆ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ವಸಂತ ಕಾಂಬಳೆ, ಮುಖ್ಯೋಪಾಧ್ಯಾಯ ಆರ್.ಆರ್.ಪವಾರ, ಶ್ರೀಮಂತ ಕಾಂಬಳೆ, ಅಜೀತ ಕಾಂಬಳೆ, ವೀಣಾ ಬಿ.ಎಸ್., ರಾಜು ಇದ್ದರು.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ,
ಲೋಕೋಪಯೋಗಿ ಇಲಾಖೆ ವಿಭಾಗ ಬೀದರ್
ಸಂಖ್ಯೆ:ಕಾನಿಇಂ:ಲೋಇ:ವಿಬಿ :5054:ಎಇ-1:2020-21:3473 ದಿನಾಂಕ: 11-01-2021
:: ಪಬ್ಲಿಕ್ ಪ್ರೊಕ್ಯುರ್‌ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ ::
ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಬೀದರ ಇವರಿಂದ, ಈ ಕೆಳಕಂಡ ಕಾಮಗಾರಿಯ ಅನುಷ್ಠಾನಕ್ಕಾಗಿ ಗುತ್ತಿಗೆದಾರರನ್ನು ನೇಮಿಸಲು, ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟನ್ ನಿಬಂಧನೆಗೊಳಪಟ್ಟು, ಅರ್ಹ ಗುತ್ತಿಗೆದಾರರಿಂದ ಪಬ್ಲಿಕ್ ಪ್ರೊಕ್ಯೂರಮೆಂಟ್ ನಲ್ಲಿ ಟೆಂಡರ್‌ಗಳನ್ನು ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಂತರಜಾಲ ತಾಣ http://eproc.karnataka.gov.in ನ್ನು ಅಥವಾ ಈ ಕಚೇರಿಗೆ ಸಂಪರ್ಕಿಸಬಹುದು.
1) ಕಾಮಗಾರಿಯ ಹೆಸರು : ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಬಸವ ಮಹಾದ್ವಾರದಿಂದ (ಬಂಗ್ಲೋ)-ತ್ರಿಪುರಾಂತದವರೆಗೆ ದ್ವಿ-ಪಥ ರಸ್ತೆ ಅಗಲೀಕರಣ ಮತ್ತು ದುರಸ್ತಿ. KPWD/2020-21/RD/WORK_INDENT132470/CALL-2, 2) ಟೆಂಡರಿಗಿಟ್ಟ ಮೊತ್ತ (ರೂ. ಗಳಲ್ಲಿ) : 89017477.93, 3) ಮುಂಗಡ ಠೇವಣಿ (ರೂ. ಗಳಲ್ಲಿ) : 13,35,263/-, 4) ಕೆಲಸ ಪೂರ್ಣಗೊಳಿಸಲು ನಿಗದಿತ ಸಮಯ.: 06 ತಿಂಗಳು
1) ಇ-ಪ್ರಾಕ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **18-01-2021 ಸಾಯಂಕಾಲ 4-00 ಗಂಟೆಯವರೆಗೆ** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20-01-2021 ಬೆಳಿಗ್ಗೆ 11.00 ಗಂಟೆಗೆ,** 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **22-01-2021 ಬೆಳಿಗ್ಗೆ 11-00 ಗಂಟೆಗೆ.**
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಬೀದರ
ವಾ.ಸಾ.ಸಂ.ಇ/ಬೀದರ/250/ಎಂಸಿ&ಎ/2020-21

ಕೆ.ಎಂ.ಎಫ್
ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ
ಕಹಾಮ ಸಂಕೀರ್ಣ, ಡಾ.ಎಂ.ಹೆಚ್ ಮರೀಗೌಡ ರಸ್ತೆ, ಬೆಂಗಳೂರು 560 029
ಫೋನ್ 080-25536625, 25536789 ಇ-ಮೇಲ್: kmfengg@gmail.com / engg@kmf.coop
ಸಂಖ್ಯೆ:ಕಹಾಮ/ಅಭಿ/NHMPP-BOILER & WTP /1199/2020 ದಿನಾಂಕ: 06.01.2021
ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳಿಯು ಇ-ಪ್ರೊಕ್ಯೂರಮೆಂಟ್ ಅಡಿಯಲ್ಲಿ ಅರ್ಹ ಗುತ್ತಿಗೆದಾರರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಚಾಲನಾ ಕೆಲಸಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ವೆಬ್‌ಸೈಟ್ www.eproc.karantaka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Helpdesk No-080 23010900 / 23010901 E mail: hphelpdesk.blr@intarvo.com]

ಕ್ರಮ ಸಂಖ್ಯೆ	ಕಾಮಗಾರಿಯ ವಿವರ	ಸಂಖ್ಯೆ	ಇ.ಎಂ.ಡಿ. ರೂ.ಸೈ.	ಗುತ್ತಿಗೆ ಅವಧಿ
1	ರಾಮನಗರ ಕನ್ನಮಂಗಲದ ನಂದಿನಿ ಹೈಟೆಕ್ ಮೆಗಾ ಪೌಡರ್ ಪ್ಲಾಂಟ್ ಘಟಕದ ಬಾಯ್ಲರ್ ಯಂತ್ರ ಹಾಗೂ ನೀರಿನ ಶುದ್ಧಿಕರಣ ಸ್ಥಾವರಗಳ ಚಾಲನೆ ಮತ್ತು ನಿರ್ವಹಣಾ ಕೆಲಸಗಳ ಸೇವೆಗಳನ್ನು ಒದಗಿಸುವುದು.	1 ಜಾಬ್	3,60,000/-	2 ವರ್ಷಗಳು

ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳವ ದಿನಾಂಕ: 13.01.2021 ರಿಂದ 02.02.2021ರ ಸಾಯಂಕಾಲ 3:00 ಗಂಟೆಯವರೆಗೆ.
ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 02.02.2021 ರ ಸಾಯಂಕಾಲ 4:00 ಗಂಟೆಯವರೆಗೆ.
ಪ್ರಿ-ಬಿಡ್ ಸಭೆ ದಿನಾಂಕ 22.01.2021 ರಂದು ಬೆಳಿಗ್ಗೆ 11:30 ಗಂಟೆಗೆ.
ಟೆಂಡರುಗಳನ್ನು (Cover 1) ತೆರೆಯುವ ದಿನಾಂಕ 05.02.2021 ರಂದು ಬೆಳಿಗ್ಗೆ 11:30 ಗಂಟೆಗೆ.
ಕರ್ನಾಟಕ ಹಾಲು ಮಹಾ ಮಂಡಳಿ ಪರವಾಗಿ
ಸಹಿ/-
ನಿರ್ದೇಶಕರು (ಅಭಿಯಂತರ)

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋ.ಇ ವಿಭಾಗ, ಶಿವಮೊಗ್ಗ
ಸಂಖ್ಯೆ:ಕಾಪಾಅ/ಶಿವಿಶಿ/ಜೆಇ-2/ಐಎಫ್‌ಟಿ-31/20-21 ದಿ:11.01.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.
3054-04-337-1-10-200 ಮಳೆಹಾನಿ ದುರಸ್ತಿ
ಕ್ರ.ಸಂ. 1. ತಾಲ್ಲೂಕು : ಸಾಗರ ತಾಲ್ಲೂಕಿನ ಕಾಮಗಾರಿ-1 **ಇಂಡೆಂಟ್ ಸಂಖ್ಯೆ :** 133627 KW-4
ಟೆಂಡರ್ ದಾಖಲಾತಿಗಳನ್ನು ಡೌನ್ ಲೋಡ್ ಮಾಡಲು ಮತ್ತು ಸಲ್ಲಿಸಲು ದಿ: 11-01-2021 to 18-01-2021 ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವದಿ 3 ತಿಂಗಳು ವರೆಗೆ (ಮಳೆಗಾಲ ಸೇರಿ)
ಸಹಿ/- ಕಾ.ಇಂ, ಲೋ.ಬಂ ಮತ್ತು ಒ.ಜ.ಸಾ ಇಲಾಖೆ,
ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ಸಂ-60/01/ಎಂಸಿಎ/20-21